ಮನಸಾರೆ ಅತ್ತುಬಿಟ್ಟಳು. ಸಾವಿಗಿಂತ ದೊಡ್ಡ ಉತ್ತರ ಮತ್ತೊಂದಿಲ್ಲ... ಉದುರಿಬಿದ್ದ ಚುಕ್ಕಿಯಂತೆ ಹಾರಿಬಿಡಬೇಕು ನಭೋಮಂಡಲದಿಂದ... ಭೂಮಿಯ ಮೇಲಿನ ಮೂಲೆಮೂಲೆಗೂ ಕೇಳುವಂತೆ ಕಿರಚಿಕೊಂಡು ಇವನ ನಾಮ ಬದ್ನಾಮ್ ಮಾಡಬೇಕು. ಇಲ್ಲವೇ ಇವನೆದುರಿಗೆ ಕುಳಿತಿದ್ದ ಆ ಭೋಸುಡಿ ನ್ಯೂಡ್ ಆಗಿ ನಗುತ್ತಿದ್ದಳಲ್ಲ ಆಕೆಯನ್ನ ಮೊದಲು ಸಾಯಿಸಬೇಕು. ಆಮೇಲೆ ತನ್ನ ಆಸ್ತಿಯಲ್ಲಿ ತಿಂದುಂಡು ತಿರಗೋ ಈ ತಿರುಪೆಯನ್ನ ಒಂದು ಗತಿ ಕಾಣಿಸಬೇಕು... ಮೈಯೊಳಗಿನ ಕಸುವೆಲ್ಲ ಕಣ್ಣೊಳಗ ತುಂಬಿಕೊಂಡು ಕೆಕ್ಕರಿಸುತ್ತಿದ್ದಳು.

'ನೀರು ಕುಡಿತಿಯಾ? ಆಕ್ಷುವಲೀ... ಹಾಂಗೆಲ್ಲ ಕೂಗಾಡೋದರಿಂದ ರಕ್ತ ಸುಟ್ಟ ಹೋಗತದ' ಎಂದು ದಿಂಬನ್ನು ಸರಿಸಿ ಅವಳ ತಲೆಯ ನೇವರಿಸಲು ಮುಂದಾದ... ಅವಳಿಗೆ ಕಿರಕಿರಿ ಆಗುತ್ತಿರುವುದನ್ನು ಮತ್ತೆ ತೋರಿಸಿಕೊಳ್ಳುವ ಮನಸ್ಸಾಗಲಿಲ್ಲ. ಮುಖದ ಮುಂದೆ ಹಿಡಿದ ನೀರಿನ ಲೋಟವನ್ನು ಎಡಗೈಯಿಂದ ತಳ್ಳಿದಳಷ್ಟೆ ಅದು ಕಿಡಕಿಗೆ ಬಡಿದು ಗಾಜು ಪುಡಿಪುಡಿಯಾಯ್ತು. ಸ್ವಾಧೀನ ಕಳೆದುಕೊಂಡ ದೇವತೆ ತನ್ನ ಕಡುಬಡವ ಭಕುತನಿಗೆ ನಷ್ಟ ಮಾಡುವವಳಂತೆ ಇವಳ ಕೋಪವೂ ಉಕ್ಕುಕ್ಕಿ ಕೆನೆಯುತ್ತಿತ್ತು. ರೂಪದರ್ಶಿಯಾಗಲು ಒಪ್ಪಿ ಬಂದಿದ್ದ ಆ ಬಡಪಾಯಿ ತುಟಿಕಚ್ಚಿಕೊಂಡು ಯಾವಾಗಲೋ ಓಡಿಹೋಗಿದ್ದಳು.

ಬ್ರಶ್, ಬಣ್ಣ, ಕ್ಯಾನವಾಸ್, ನೀರಿನ ಲೋಟವನ್ನು ಎತ್ತಿಡಲು ಹೊರಗೆ ಬರುವುದೆ ತಡ ಧಡಾರೆಂದು ಬಾಗಿಲು ಮುಚ್ಚಿಕೊಂಡಿತು. ಆಕ್ಷುವಲೀ ತಾನೊಬ್ಬ ಕಲಾವಿದ ಚಿತ್ರಕ್ಕೆ ತಕ್ಕ ಲೋಕೇಶನ್ ಸಲುವಾಗಿ ಬೆಡ್‌ರೂಮ್ ಬಳಸಿದೆನೆ ಹೊರತು ಅನ್ಯತಾ ಭಾವಿಸಿಲ್ಲವೆಂದೂ... ಇಂಥದ್ದೊಂದು ಚಿತ್ರ ಬರೆಯಲು ನೀನೆ ರೂಪದರ್ಶಿಯಾಗೆಂದು ಕೇಳಿದಾಗಲೂ ಹೀಗೆ ಉರಿದೆದ್ದು ಕಿಡಿಕಾರಿದ್ದಳಾದ್ದರಿಂದ ಮೈಮಾರುವ ಹೆಂಗಸೊಬ್ಬಳನ್ನು ಕರೆದುತಂದಿದ್ದು ತಪ್ಪೆ? ಹುಚ್ಚಿಯಂತಾಡುವ ಸ್ವಭಾವ ತಿಳಿದಿದ್ದ ವೈರಮುಡಿ ಅವಳು ಸಾಯಲೂಬಹುದೆಂದು ಆಲೋಚಿಸಿ ಬೆವೆತುಹೋದ.

*****

ಸರುವೊಂದು ನಿಂತಂತಾಗಿ ಬೀಳುವ ಮಳೆಯ ಸಪ್ಪಳ ಕಮ್ಮಿಯಾದಾಗ ಜೀರಜೀರುಂಡೆಗಳು ಕಪ್ಪೆಗಳು ಗವ್ವೆನ್ನುವ ಕತ್ತಲಿನ ದರ್ಬಾರ್ ನಡೆಸುತ್ತಿದ್ದವು. ವಿನಿತಾಳ ಮನದಲ್ಲಿ ಆ ಉಗ್ರಮೂರ್ತಿಯ ಸಿಇಓ, ಮುದಿಯ ಪದುಮಾರ, ಬಾಯಹರಕಿ ಅತ್ತೆಯೂ ಕಲಾಕ್ಷೇತ್ರದ ಮೆಟ್ಟಿಲುಗಳು ಒಂದೊಂದಾಗಿ ನೆನಪಾಗುತ್ತಿದ್ದವು. ಇಡೀ ಕತ್ತಲನ್ನು ನುಂಗಿಕೊಂಡಿದ್ದ ಭಯದ ಹದ್ದೊಂದು ರೆಕ್ಕೆಬಿಚ್ಚಿಕೊಂಡು ಆ ರೆಕ್ಕೆಯ ಆಸರೆಯಲ್ಲಿ ವಿನಿತಾಳನ್ನು ಕರೆದು ಕೂರಿಸಿಕೊಂಡು ಸಾಂತ್ವನ ಹೇಳುತ್ತಿದ್ದ ಹಾಗೆ ಭಾಸವಾಯಿತು. ಅಪ್ಪ ಬಂದಾಗ ಮಲಗಿದಂತೆ ನಟಿಸಬೇಕೆಂದುಕೊಂಡಿದ್ದರೂ ಅವರ ಕರುಣಾರ್ದ್ರ ಕಣ್ಣುಗಳಿಗೆ ಮೋಸಮಾಡುವುದಾಗಲಿಲ್ಲ. ಊಟ ನೀರಿಲ್ಲದೆ ಹಾಸಿಗೆ ಹಿಡಿದು ಮಲಗಿದ್ದ ವಿನಿತಾ ಅಪ್ಪನನ್ನು ಕಾಣುತ್ತಲೇ ಮಡುಗಟ್ಟಿದ್ದ ದುಃಖದ ಕಟ್ಟೆ ಒಡೆದು ಮತ್ತೆ ಬಿಕ್ಕಲಾರಂಭಿಸಿದಳು.

ಮನೆಯವಳು ಸತ್ತಾಗಿನಿಂದ ಬೇಕುಬೇಡಗಳಿಗೆಲ್ಲ ಅವಳನ್ನು ಯಾರೂ ಒತ್ತಾಯ ಮಾಡದೆ ತನ್ನಪಾಡಿಗೆ ತಾನು ಸ್ವಚ್ಛಂದವಾಗಿ ಇದ್ದುಬಿಡಲಿ ಸಾಕು. ಅವಳ ವಿಕ್ಷಿಪ್ತ ಮನಸ್ಸಿನ ಹುಚ್ಚುತನ ಮುಂದೆಂದೂ ಕಾಣದಿರಲೆಂದು ಸತತ ದೇವರಲ್ಲಿ ಮೊರೆಯಿಡುತ್ತಿದ್ದ ಶಾಣಪ್ಪನವರು ಗಾಬರಿಯಾಗಿ ಬಂದಿದ್ದರು. ಹ್ಯಾಪಲಾಸಿ ಮುಖ ಮಾಡಿಕೊಂಡು ದೈನೇಸಿ ಸ್ಥಿತಿಯಲ್ಲಿ ನಿಂತಿದ್ದ ಅಳಿಯನನ್ನು ಕಂಡೂಕಾಣದವರಂತೆ ಎದೆಗೊರಗಿದ್ದ ಮಗಳನ್ನು ಸಂತೈಸಿದರು. ನನಗೆ ಇವನ